॥ ಶ್ರೀ ಭೋಗಾಪುರೇಶ ಪ್ರಸನ್ನ ॥

ನೋಡಿದೆನು ಭೋಗಾಪುರೇಶನ
ನೋಡಿದೆನು ಸರ್ವೇಶನ ।
ನೋಡಿದೆನು ಭಾರತಿಯರಮಣನ
ಜೋಡು ಕಾಲುವೆ ಒಡೆಯನ ॥ ೧ ॥

ವೇಗದಿಂದಲಿ ಪೋಗಿ ನೋಡಿರಿ
ಭೋಗಾಪುರಿ ಪ್ರಾಣೇಶನ ।
ಬಾಗುವರ ಭವರೋಗ ನೀಗುವ
ಯೋಗಿಗಳ ಮನಃಪ್ರಿಯನ ॥ ೨ ॥

ಚೈತ್ರ ಶುಕ್ಲ ಪ್ರತಿಯಪದೆಯಲಿ
ಗರುಡಧ್ವಜವ ಕಟ್ಟಲು ।
ಸುತ್ತ ಗ್ರಾಮದ ಪರಸಿ ಬಾಹೋ
ಅರ್ಥಿಯನು ನಾ ನೋಡಿದೆ ॥ ೩ ॥

ಹೇರು ಕಂತಲಿ ಕುದುರೆಗಳ
ಮೇಲೆರಿದ್ದ ಮಕ್ಕಳುಗಳು ।
ನಾರಿಯರು ಬಿಸಿಲೊಳಗೆ ಬಾಹೋ
ಚಾರು ಚರಿತ್ರವ ನೋಡಿದೆ ॥ ೪ ॥

ಎತ್ತು ಕಂತಲಿ ಕುದುರೆಗಳ
ಮೇಲ್ಹೊತ್ತಿದ್ದ ಪದಾರ್ಥವು ।
ಮಿತ್ರೆಯರು ಬಿಸಿಲೊಳಗೆ ಬಾಹೊ
ವಿಚಿತ್ರವನು ನಾ ನೋಡಿದೆ ॥ ೫ ॥

ಉಡುವ ಧೋತರ ಉಡುದಾರ
ಕಡಗ ಬೆಳ್ಳಿಯ ಹಸ್ತವು ।
ಒಡೆಯ ಶ್ರೀಭೋಗಾಪುರೇಶಗೆ
ಮುಡುಪು ಹಾಕೊದ ನೋಡಿದೆ ॥ ೬ ॥

ಕಣ್ಣು ಕಂಗಳ ಸಣ್ಣನಾಮು
ಬಣ್ಣದ ತೊಟ್ಟಿಲುಗಳು ।
ಚಿನ್ನನ್ಹರಿಕೆ ಒಪ್ಪಿಸುವುದನು
ಕಣ್ಣಿನಿಂದಲಿ ನೋಡಿದೆ ॥ ೭ ॥

ಚೆಂಡಕಿ ಜಾವಳವು ಮೊದಲಾದ
ಕಂದರ ಉಪನಯನವು ।
ದಿಂಡು ಉರುಳಿಕೆ ಗಂಡುದೀಪ
ಹೊರುವ ಸಂಭ್ರಮ ನೋಡಿದೆ ॥ ೮ ॥

ಕುಚ್ಚಿಧೂರಣ ಕಡಬು ಶಾವಿಗೆ
ಪರಮನ್ನ ದದ್ಧೋದನ ।
ಅಚ್ಚ ಭಕ್ತಿಲಿ ಪ್ರಾಣಪತಿಗೆ
ಸಮರ್ಪಿಸುವದ ನೋಡಿದೆ ॥ ೯ ॥

ಕರಿದ ಹೂರಣ ಕಡಬು ಶ್ಯಾವಿಗೆ
ಚಿತ್ರಾನ್ನ ಬುರುಬುರಿಯು ।
ಪರಿಪರಿಯ ಭಕ್ಷ್ಯಗಳ ನೈವೇದ್ಯ
ಕೊಡುವ ಸಂಭ್ರಮ ನೋಡಿದೆ ॥ ೧೦ ॥

ಗಂಧವಾಹನ ಮಹಿಮೆಯನು ದ್ವಿಜ
ವೃಂದ ಭಕುತಲಿ ಪಾಡುತ ।
ಚೆಂದದಿಂ ವ್ಯಾಕ್ಯಾರ್ಥ ನಡೆಸುವ
ಅಂದವನು ನಾ ನೋಡಿದೆ ॥ ೧೧ ॥

ಬೀಸಣಿಕೆ ಬಿಳಿಎಲೆಯು
ಬ್ಯಾಸಿಗೆಗರಳುವ ಮಲ್ಲಿಗೆ ।
ಸೋಸಿನಿಂದಲಿ ಬ್ಯಾಳಿ ಪಾನಕ
ಪೂಜೆಯನು ನಾ ನೋಡಿದೆ ॥ ೧೨ ॥

ಪಾನಕ ಪೂಜೆಗಳ ಅವಭೃತ
ಸ್ನಾನದ ಮಹಮಹಿಮೆಯು ।
ದೀನರನು ಉದ್ಧಾರ ಮಾಡುವ
ಪ್ರಾಣಪತಿಯನು ನೋಡಿದೆ ॥ ೧೩ ॥

ಸಾಲಾಗಿ ಭಕ್ತರು ತೆಂಗನೊಡಿಸಿ
ಮಂಗಳಾರತಿ ಮಾಡಿಸಿ ।
ಸಾಲುಮಂಟಪದಲ್ಲಿ ಎಲೆಗಳ
ಹಾಕೊ ಸಂಭ್ರಮ ನೋಡಿದೆ ॥ ೧೪ ॥

ಅಡವಿಯೊಳ್ ಸಾಲ್ಗಿಡದ ಮಧ್ಯದಿ
ಒಡೆಯ ರಥವೇರಿ ಮೆರೆಯಲು ।
ತಡೆಯದಲೆ ಬಂದು ಪರಸಿಗಪ್ಪಣೆ
ಕೊಡುವ ಸಂಭ್ರಮ ನೋಡಿದೆ ॥ ೧೫ ॥

"ನಾರಸಿಂಹ"ನ ಭಕುತ
ಶ್ರೀ ಭೋಗಾಪುರೇಶನ ಚರಣವ ।
ಬಾರಿಬಾರಿಗೆ ಸ್ಮರಣೆ ಮಾಡುತ
ಬಂದು ಊರನು ಸೇರಿದೆ ॥ ೧೬ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥